ದಿನಾಂಕಃ 19.08.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ **5** ರಿಂದ **8** ನೇ ಪ್ರತಿವಾದಿಗಳ ಪರ ವಕೀಲರಿಂದಃ

9. ಸರ್ವೇ ನಂ.330 ರಲ್ಲಿ ನನ್ನ ಪಾಲಿಗೆ 16 ವರೆ ಗುಂಟೆ ಜಮೀನು ಬಂದಿತ್ತು, ಅದರಲ್ಲಿ 2 ಗುಂಟೆಯಲ್ಲಿ ಮನೆ ಕಟ್ಟಿದ್ದೇನೆ. ಸದರಿ ಮನೆ ಇರುವ 2 ಗುಂಟೆ ಬಿಟ್ಟು ಉಳಿದ ಜಮೀನು ಮಾರಾಟ ಮಾಡಿದ್ದೇನೆ ಎಂದರೆ ಸರಿ. ಸದರಿ ಜಮೀನು ನನ್ನ ಅಜ್ಜನ ಕಾಲದಿಂದ ಬಂದಿರುವ ಆಸ್ತಿ ಎಂದರೆ ಸರಿ. ನನ್ನ ಅಜ್ಜನ ಹೆಸರಿನಲ್ಲಿದ್ದ ಆಸ್ತಿಗಳು ಅವರ ಮಕ್ಕಳ ಹೆಸರುಗಳಲ್ಲಿ ಪಾಲು ಆಗಿ ನಂತರ ಅವರ ಮೊಮ್ಮಕ್ಕಳ ಹೆಸರುಗಳಲ್ಲಿ ಪಾಲು ಆಗಿರುತ್ತವೆ ಎಂದರೆ ಸರಿ. ಸದರಿ ಪಾಲಾಗಿರುವುದನ್ನು ಯಾವುದೇ ನ್ಯಾಯಾಲಯದಲ್ಲಿ ಯಾರೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ನನ್ನ ಅಣ್ಣ ಬಸವಣ್ಣೆ ಸರ್ವೇ ನಂ.330 ರಲ್ಲಿ 5 ವರೆ ಗುಂಟೆ ಜಮೀನು ಬಂದಿದ್ದು, ಅದನ್ನು ಅಪ್ಪರಾಯಿರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅದರ ಕ್ರಯ ಪತ್ರವೆಂದು ಸಾಕ್ಷಿಗೆ ಒಂದು ಕ್ರಯ ಪತ್ರವನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ2 ಎಂದು ಗುರುತಿಸಲಾಯಿತು. ಸದರಿ ಖರೀದಿದಾರರಿಗೆ ಸದರಿ ಜಮೀನುಗಳ ಕಬ್ಜೆಯನ್ನು ನಾನು ಮತ್ತು ನನ್ನ ಅಣ್ಣ ಬಿಟ್ಟು ಕೊಟ್ಟಿದ್ದು, ಅವರೇ ಕಬ್ಜೆಯಲ್ಲಿದ್ದಾರೆ ಎಂದರೆ ಸರಿ. ನಮ್ಮ ನಮ್ಮ ಪಾಲಿಗೆ ಬಂದ ಜಮೀನುಗಳಲ್ಲಿ ನಾವು ಕಬ್ಜೆಯಲ್ಲಿದ್ದೇವೆ.

10. ಪ್ರತಿವಾದಿಗಳಿಗೆ ಬಂದ ಪಾಲಿನಲ್ಲಿ ಅವರು ಕಬ್ಜೆಯಲ್ಲಿದ್ದಾರೆ ಎಂದರೆ ಸರಿ. ಅಪ್ಪರಾಯಪ್ಪರವರು ಸರ್ಕಾರಿ ನೌಕರರಾಗಿದ್ದರು ಎಂದರೆ ಸರಿ. ಆಗ ಅವರು ಸರ್ವೇ ನಂ.298 ರಲ್ಲಿ ಜಮೀನನ್ನು ದೇಶಪಾಂಡೆರವರಿಂದ ಖರೀದಿ ಮಾಡಿದ್ದಾರೆ, ಅದರ ಖರೀದಿ ಪತ್ರವೆಂದು ಸಾಕ್ಷಿಗೆ ಒಂದು ಖರೀದಿ ಪತ್ರವನ್ನು ತೋರಿಸಿದ್ದು, ಸಾಕ್ಷಿ ಅದನ್ನು ನೋಡಿ ಅದು ಖರೀದಿ ಪತ್ರವಾಗಿದೆ, ಅದು ಡೈರಿ ನಂ.5079 ರ ಪ್ರಕಾರ ಭೋಗಸ್ ಆಗಿದೆ ಎನ್ನುತ್ತಾರೆ. ಸದರಿ ಖರೀದಿ ಪತ್ರವನ್ನು ನಿಡಿ3 ಎಂದು ಗುರುತಿಸಲಾಯಿತು.

ಸದರಿ ಡೈರಿಯನ್ನು ಪ್ರಶ್ನೆ ಮಾಡಿ ಪ್ರಕರಣ ದಾಖಲು ಮಾಡಿದ್ದೀರಾ ಎಂದರೆ ಸಾಕ್ಷಿ ಯಾವುದೂ ಮಾಡಿಲ್ಲ, ಈಗ ನ್ಯಾಯಾಲಯಕ್ಕೆ ಬಂದಿದ್ದೇನೆ ಎನ್ನುತ್ತಾರೆ. ಸರ್ವೇ ನಂ.298 ರ ಒಟ್ಟು ವಿಸ್ತೀರ್ಣ 18 ಎಕರೆ 15 ಗುಂಟೆ ಎಂದರೆ ಸರಿ. ಅದರಲ್ಲಿ ಅರ್ಧ ಜಮೀನನ್ನು ಅಪ್ಪರಾಯಪ್ಪರವರು ಉಳಿದ ಅರ್ಧ ಜಮೀನನ್ನು ಗೂಳಪ್ಪರವರು ಖರೀದಿ ಮಾಡಿದ್ದಾರೆ ಎಂದರೆ ಸರಿ. ಇದಾದ ನಂತರ 1984 ರಲ್ಲಿ ಅವರ ಮಧ್ಯೆ ವಿಭಾಗವಾಗಿ ಡೈರಿ ಆಗಿದೆ ಎಂದು ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದಾರೆ, ಸದರಿ ದಾಖಲೆಯನ್ನು ನಿಡಿ4 ಎಂದು ಗುರುತಿಸಲಾಯಿತು. ಹಿರಿಯರ ಆಸ್ತಿಗಳಲ್ಲಿ ಈಗಾಗಲೇ ಪಾಲು ಆಗಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ